- ಭಾರತದಲ್ಲಿ ಸುಮಾರು 40 ಸಾವಿರ ಮಂದಿ ಮೆದುಳು ಗಡ್ಡೆ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ತೊಂದರೆಗೆ ಗ್ಲಿಯೊಬ್ಲಾಸ್ಟೋಮಾ ಮಲ್ಟಿಫಾರ್ಮ್ (ಜಿಬಿಎಂ) ಎಂದು ಹೆಸರು.
- ಈ ಸಮಸ್ಯೆ ಶೇ.20ರಷ್ಟು ಪ್ರಮಾಣದಲ್ಲಿ ಮಕ್ಕಳಲ್ಲೂ ಕಾಣಿಸಿಕೊಳ್ಳುತ್ತದೆ.
- ಎಸ್‌ಪಿಎಂಎಫ್ ಎಂಬ ಹೊಸ ಚಿಕಿತ್ಸೆಯಿಂದ ಯಾವುದೇ ಶಸ್ತ್ರಚಿಕಿತ್ಸೆ ಇಲ್ಲದೆ ಮೆದುಳು ಗಡ್ಡೆಯನ್ನು ಕರಗಿಸಿ ರೋಗಿಯನ್ನು ಆರೋಗ್ಯಪೂರ್ಣವಾಗುವಂತೆ ಮಾಡಬಹುದು.

ಹೆಲ್ತ್‌ಕೇರ್‌ನಲ್ಲಿ ತೋರಿಸಿದಾಗ ಯಾವುದೇ ಶಸ್ತ್ರಚಿಕಿತ್ಸೆ ಇಲ್ಲದೆ ಮೆದುಳಿನ ಗಡ್ಡೆ (ಬ್ರೈನ್ ಟ್ಯೂಮರ್) ಗೆ ಸೀಕ್ವೆನ್ಷಿಯಲಿ ಪ್ರೋಗ್ರಾಮ್ಡ್ ಮ್ಯಾಗ್ನೆಟಿಕ್ ಫೀಲ್ಡ್ ಥೆರಪಿ (ಎಸ್‌ಪಿಎಂಎಫ್ ಥೆರಪಿ) ಎಂಬ ಚಿಕಿತ್ಸೆ ಪಡೆದಾಗ ಸಂಪೂರ್ಣವಾಗಿ ಗುಣಮುಖರಾಗಲು ಸಾಧ್ಯವಾಯಿತು. ಇದೀಗ ಶಶಿಧರ ಹುಷಾರಾಗಿದ್ದು, ಎಂದಿನಂತೆ ದೈನಂದಿನ ಕೆಲಸ ಮಾಡುವಂತಾಗಿದೆ.

***

ಬೆಂಗಳೂರಿನಲ್ಲಿ ಕಿವಿ, ಮೂಗು ಗಂಟಲು ತಜ್ಞರಾಗಿರುವ ಡಾ.ಪಿ. ರಂಗರಾಜನ್ ಅವರ ಸಮಸ್ಯೆಯೂ ಹೆಚ್ಚು ಕಡಿಮೆ ಇದೇ ತರದ್ದು. ಇವರ ದೇಹದ ಬಲಭಾಗಕ್ಕೆ ವಿಪರೀತ ನಿತ್ರಾಣ, ಮಾತನಾಡಲೂ ಅಸಾಧ್ಯವಾಗುವಷ್ಟು ಅಶಕ್ತತೆ, ಬಯಾಪ್ಸಿ ಮಾಡಿಸಿಕೊಂಡಾಗ ಇವರಿಗೆ ಮೆದುಳಿನಲ್ಲಿ ಗ್ಲಿಯೋಬ್ಲಾಸ್ಟೊಮಾ ಸಮಸ್ಯೆ ಇರುವುದು ಗೊತ್ತಾಯಿತು. ರೇಡಿಯೊಥೆರಪಿ, ಕೀಮೊಥೆರಪಿ ಮಾಡಿಸಿಕೊಂಡರೂ ಮುಂದಿನ ಆರು ತಿಂಗಳಿನಲ್ಲಿ ಮೆದುಳಿನ ಗಡ್ಡೆ ದೊಡ್ಡದಾಗಿರುವುದು ಪತ್ತೆಯಾಯಿತು. ಆ ಬಳಿಕ ಎಸ್‌ಬಿಎಫ್‌ನಲ್ಲಿ ಮ್ಯಾಗ್ನೆಟಿಕ್ ಚಿಕಿತ್ಸೆ ಪಡೆದಾಗ ಗಡ್ಡೆ ಕರಗಿ ಆರೋಗ್ಯ ಸಮಸ್ಯೆ ಬಗೆಹರಿಯಿತು. ಈಗ ಮತ್ತೆ ಈ ವೈದ್ಯರು ಶಸ್ತ್ರಚಿಕಿತ್ಸೆ ಮತ್ತಿತರ ತಮ್ಮ ಕೆಲಸದಲ್ಲಿ ಮಗ್ನರಾಗುವಂತಾಗಿದೆ.

***

ಮೆದುಳಿನಲ್ಲಿ ಬೆಳೆಯುವ ಗಡ್ಡೆ ಕ್ಯಾನ್ಸರ್ ಆಗಿ ಬಹುವಾಗಿ ಕಾಡುತ್ತದೆ. ನೋವು ರಹಿತ ಹಾಗೂ ಶಸ್ತ್ರಚಿಕಿತ್ಸೆ ರಹಿತ ಅತ್ಯಾಧುನಿಕ ಚಿಕಿತ್ಸಾ ವಿಧಾನವೊಂದನ್ನು ನಿವೃತ್ತ ವಿಂಗ್ ಕಮಾಂಡರ್ ಡಾ. ವಿ.ಜಿ. ವಸಿಷ್ಠ ಅವರು ಅಭಿವೃದ್ಧಿಪಡಿಸಿದ್ದು ಮೆದುಳಿನಲ್ಲಿ ಕ್ಯಾನ್ಸರ್ ಗಡ್ಡೆ ಬೆಳೆದು ಜೀವನ್ಮರಣದ ಮಧ್ಯೆ ಹೋರಾಡುತ್ತಿರುವವರಿಗೆ ಇದೊಂದು ವರದಾನ.



'ಭಾರತದಲ್ಲಿ ಕನಿಷ್ಠ 40 ರಿಂದ 50 ಸಾವಿರ ಮಂದಿ ನಾಗರಿಕರು ಗ್ಲಿಯೊಬ್ಲಾಸ್ಟೋಮಾ ಮಲ್ಟಿಫಾರ್ಮ್ (ಜಿಬಿಎಂ) ಮೆದುಳು ಗಡ್ಡೆಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಸಮಸ್ಯೆ ಶೇ.20ರಷ್ಟು ಪ್ರಮಾಣದಲ್ಲಿ ಮಕ್ಕಳಲ್ಲೂ ಕಾಣಿಸಿಕೊಳ್ಳುತ್ತದೆ. ಮೆದುಳಿನ ಗಡ್ಡೆಗಳಿಗೆ ಪ್ರಾಥಮಿಕವಾಗಿ ಶಸ್ತ್ರಚಿಕಿತ್ಸೆ, ಕೀಮೊಥೆರಪಿ ಹಾಗೂ ವಿಕಿರಣ ಚಿಕಿತ್ಸೆ ನೀಡಲಾಗುತ್ತದೆ. ಈ ಚಿಕಿತ್ಸೆಯ ನಂತರ ರೋಗಿಯ ಸರಾಸರಿ ಜೀವಿತಾವಧಿ 14 ತಿಂಗಳಿಗಿಂತ ಮೇಲ್ಪಟ್ಟು ಇರುವುದಿಲ್ಲ' ಎಂಬ ಅಪಾಯದ ಮಾತುಗಳ ಮೂಲಕ ಎಚ್ಚರಿಕೆ ನೀಡುತ್ತಾರೆ ಎಸ್‌ಬಿಎಫ್ ಹೆಲ್ತ್‌ಕೇರ್‌ನ ಸಂಸ್ಥಾಪಕ ಡಾ.ವಿ.ಜಿ.ವಸಿಷ್ಠ.

ಎಸ್‌ಪಿಎಮ್‌ಎಫ್ ಮೆದುಳಿನ ಗಡ್ಡೆಗೆ ವಿಭಿನ್ನ ಮಾದರಿಯ ಚಿಕಿತ್ಸೆಯಾಗಿದ್ದು, ಸುರಕ್ಷಿತ, ನೋವುರಹಿತ, ದುಬಾರಿಯಲ್ಲದ, ವೈಜ್ಞಾನಿಕವಾಗಿ ದೃಢಪಟ್ಟ ಹಾಗೂ ಅತ್ಯಂತ ಪರಿಣಾಮಕಾರಿ ಚಿಕಿತ್ಸಾ ವಿಧಾನ. ರೋಗಿಯ ರೋಗದ ಸ್ಥಿತಿಯನ್ನು ಎಮ್‌ಆರ್‌ಐ ಸ್ಕ್ಯಾನ್ ಮೂಲಕ ಪತ್ತೆ ಹಚ್ಚಲಾಗುತ್ತದೆ. ರೋಗ ಪತ್ತೆಗಾಗಿ ನೀಡುವ ಈ ಚಿಕಿತ್ಸೆಯ ಮುಂದುವರಿದ ಭಾಗವನ್ನು ಆಕ್ಸಿಸ್ ಸೋಮಾ ಎಂಬ ವೈದ್ಯಕೀಯ ಸಾದನದ ಮೂಲಕ ನಿರ್ವಹಿಸಲಾಗುತ್ತದೆ ಎನ್ನುತ್ತಾರೆ ಈ ವೈದ್ಯರು. 'ಗ್ಲಿಯೊಬ್ಲಾಸ್ಟೋಮಾ ಮಲ್ಟಿಫಾರ್ಮ್ (ಜಿಬಿಎಂ) ಎಂಬ ಮೆದುಳು ಗಡ್ಡೆಯ ಸಮಸ್ಯೆಗೆ 'ಸೀಕ್ವೆನ್ಷಿಯಲೀ ಪ್ರೋಗ್ರಾಮ್ಡ್ ಮಾಗ್ನೆಟಿಕ್ ಫೀಲ್ಡ್ಸ್' (ಎಸ್‌ಪಿಎಂಎಫ್) ಎಂಬ ಅತ್ಯಾಧುನಿಕ ಚಿಕಿತ್ಸಾ ವಿಧಾನ ಸೂಕ್ತ ಪರಿಹಾರ' ಎನ್ನುವ ಡಾ. ವಸಿಷ್ಠ, ಈ ವಿಧಾನದಲ್ಲಿ ಆಕ್ಸಿಸ್ ಸೋಮಾ ಎಂಬ ಎಂಆರ್‌ಐ ಸ್ಕ್ಯಾನರ್ ಮಾದರಿಯ ಯಂತ್ರದ ಮೂಲಕ ಕ್ಯಾನ್ಸರ್ ಗಡ್ಡೆಗಳನ್ನು ಕರಗಿಸಲಾಗುತ್ತದೆ. ರೋಗಿಯು ನಿತ್ಯ ಒಂದು ಗಂಟೆಯಂತೆ ಸತತ 28 ದಿನ ಚಿಕಿತ್ಸೆ ಪಡೆಯಬೇಕಾಗುತ್ತದೆ. ಇದಕ್ಕೆ ಅಂದಾಜು 1.5 ಲಕ್ಷ ರೂಪಾಯಿ ವೆಚ್ಚವಾಗುತ್ತದೆ' ಎಂದು ಹೇಳುತ್ತಾರೆ.

ಸೇನೆಯಿಂದ ನಿವೃತ್ತರಾದ ಬಳಿಕ ಡಾ. ವಸಿಷ್ಠ ಎಸ್‌ಬಿಎಫ್ ಹೆಲ್ತ್‌ಕೇರ್ ಎಂಬ ವೈದ್ಯಕೀಯ ಸಂಸ್ಥೆ ಸ್ಥಾಪಿಸಿದ್ದು, ಅಂದಿನಿಂದ ಕರ್ನಾಟಕದ 100 ಮಂದಿ ಸೇರಿದಂತೆ 500ಕ್ಕೂ ಹೆಚ್ಚು ಕ್ಯಾನ್ಸರ್ ರೋಗಿಗಳಿಗೆ ಈ ಚಿಕಿತ್ಸೆ ನೀಡಿ ಯಶಸ್ವಿಯಾಗಿದ್ದಾರೆ. ಎಲ್ಲ ರೀತಿಯ ಕ್ಯಾನ್ಸರ್ ಹಾಗೂ ಸಂಧಿವಾತಕ್ಕೂ ಇದೇ ವಿಧಾನದಲ್ಲಿ ಚಿಕಿತ್ಸೆ ನೀಡಬಹುದು.

**ಮಾಹಿತಿಗೆ 9900548375**

## ಕಾಡುವ ನರರೋಗ

ಜೀವನಶೈಲಿ ಕಾಯಿಲೆಗಳಾದ ಮಧುಮೇಹ, ರಕ್ತದೊತ್ತಡ, ಅತಿತೂಕ, ಬೊಜ್ಜು ಮುಂತಾದವು ದೇಹಕ್ಕೆ ಸಂಬಂಧಿಸಿದ್ದಾದರೆ ನರವ್ಯೂಹಕ್ಕೆ ಸಂಬಂಧಿಸಿದ ಕಾಯಿಲೆಯೊಂದು ಇಂದು ಜನರನ್ನು ಹೆಚ್ಚಾಗಿ ಬಾಧಿಸುತ್ತಿದೆ. ಮಾನಸಿಕ ತೊಂದರೆ ನೀಡುವ ರೋಗ 'ಮಲ್ಟಿಪಲ್ ಸ್ಕ್ಲೆರೋಸಿಸ್' (ಎಂಎಸ್) ಈಗ ನಗರ ಪ್ರದೇಶಗಳಲ್ಲಿ ಜನರನ್ನು ಹೆಚ್ಚಾಗಿ ಬಾಧಿಸುತ್ತಿದೆ. ಅದರಲ್ಲೂ 20ರಿಂದ 45 ವರ್ಷದವರಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಮಹಿಳೆ–ಪುರುಷ ಇಬ್ಬರನ್ನೂ ತೊಂದರೆಗೊಳಪಡಿಸುತ್ತಿದ್ದರೂ ಮಹಿಳೆಯರಲ್ಲಿಯೇ ಈ ಸಮಸ್ಯೆ ಹೆಚ್ಚು. ಕಾರಣ ಮಾನಸಿಕ ಒತ್ತಡ ಹೆಚ್ಚುತ್ತಿರುವುದು ಎಂಬುದು ನರರೋಗ ತಜ್ಞರು ನೀಡುವ ಕಾರಣ.

ಈ ನರರೋಗ ಕಾಣಿಸಿಕೊಳ್ಳಲು ಕಾರಣ ಮೆದುಳಿನಲ್ಲಿರುವ ನರವ್ಯೂಹದಲ್ಲಿ ರೋಗ ಪ್ರತಿರೋಧ ಶಕ್ತಿ ಕಡಿಮೆಯಾಗುವುದೇ ಆಗಿದೆ ಎನ್ನುತ್ತಾರೆ ತಜ್ಞರು. ಇದೊಂದು ದೀರ್ಘಕಾಲಿಕ ಕೇಂದ್ರ ನರಮಂಡಲದ ಕಾಯಿಲೆ. ಇದು ಮೆದುಳು, ಬೆನ್ನೆಲುಬು, ಮತ್ತು ಕಣ್ಣಿನ ನರಗಳನ್ನು ಬಾಧಿಸುತ್ತದೆ. ಇದರಿಂದ ದೃಷ್ಟಿ ಮಂದವಾಗುವಿಕೆ, ದೃಷ್ಟಿ ಮಂದ, ಕೈಕಾಲು ಜೋಮು ಹಿಡಿದ ಹಾಗೆ ಆಗುವುದು, ಯಾವುದೇ ಭಾಗ ಮರಗಟ್ಟುವಿಕೆ, ನಡೆಯುವಾಗ ದೇಹದ ಅಸಮತೋಲನ ಮತ್ತು ಕಾಯಿಲೆಯು ಹೆಚ್ಚಿದಂತೆ, ಬ್ಲಾಡರ್ ಕಾರ್ಯಸ್ಥಗಿತಗೊಳ್ಳಬಹುದು, ಮುಖದಲ್ಲಿ ಅಲ್ಲಲ್ಲಿ ನೋವು ಬರುವುದು, ಎದುರಿನ ವ್ಯಕ್ತಿಯನ್ನು ಗುರುತಿಸಲು ಕಷ್ಟವಾಗುವುದು ಮತ್ತು ನಡೆದಾಡಲು ತೊಂದರೆಯಾಗಬಹುದು.

### ಪತ್ತೆ ಹೇಗೆ?

ಮೇಲಿನ ಲಕ್ಷಣಗಳು ಕಂಡುಬಂದರೆ ರೋಗಿಯನ್ನು ಎಂಆರ್‌ಐ ಸ್ಕ್ಯಾನ್‌ಗೆ ಒಳಪಡಿಸಬೇಕು. ಸ್ಕ್ಯಾನ್ ಬಳಿಕ ರೋಗ ಪತ್ತೆಯಾದ ಬಳಿಕ ರಕ್ತಪರೀಕ್ಷೆ ಮಾಡಿಸಿದಾಗ ಸ್ಪಷ್ಟವಾಗಿ ಕಾಯಿಲೆ ಪತ್ತೆಯಾಗುತ್ತದೆ.

'ನರರೋಗಕ್ಕೆ ಸಂಬಂಧಿಸಿದ ಈ ಸಮಸ್ಯೆಗೆ ಗುಳಿಗೆಗಳು, ಸ್ಟೀರಾಯ್ಡ್ಸ್, ಇಂಜೆಕ್ಷನ್‌ಗಳನ್ನು ಹಂತ ಹಂತವಾಗಿ ನೀಡಿ ಚಿಕಿತ್ಸೆ ಮಾಡಲಾಗುತ್ತದೆ. ರೋಗ ಪತ್ತೆ ಬೇಗ ಆದಷ್ಟು ಗುಣವಾಗುವ ಪ್ರಮಾಣ ಬೇಗ ಆಗುತ್ತದೆ' ಎನ್ನುತ್ತಾರೆ ಬೆಂಗಳೂರಿನ ನರರೋಗ ತಜ್ಞ ಡಾ. ದಿನೇಶ್.

'ನಗರ ಪ್ರದೇಶಗಳಲ್ಲಿ ಕಲುಷಿತ ವಾತಾವರಣ, ಅಶುದ್ಧ ಗಾಳಿ, ಮಾನಸಿಕ ಒತ್ತಡ ಇವೇ ಮುಂತಾದ ಕಾರಣಗಳಿಂದ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತದೆ. ಹೀಗಾಗಿ ಮುನ್ನೆಚ್ಚರಿಕೆ ವಹಿಸಬೇಕು. ಆರಂಭದ ಹಂತದಲ್ಲೇ ರೋಗ ಪತ್ತೆ ಹಚ್ಚುವುದರಿಂದ ರೋಗಿ ಬೇಗನೆ ಗುಣವಾಗಲು ಸಾಧ್ಯವಾಗುತ್ತದೆ. ಈ ನರರೋಗಕ್ಕೆ ಚಿಕಿತ್ಸೆ ನೀಡದೇ ಹೋದರೆ ಅಂಗವೈಕಲ್ಯ ಉಂಟಾಗಬಹುದು' ಎಂದು ಹೇಳುತ್ತಾರೆ ಈ ವೈದ್ಯರು.